ಕರ್ನಾಟಕ ವಿಧಾನ ಸಭೆ
KARNATAKA LEGISLATIVE ASSEMBLY

ಶುಕ್ರವಾರ 27ನೇ ಮಾರ್ಚ್ 1998ರಂದು

ಸದನವು ವಿಧಾನ ಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 9.30 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು : **(ಶ್ರೀ ರಮೇಶ್ ಕುಮಾರ್)** ಅವರು ಪೀಠವನ್ನು ಅಲಂಕರಿಸಿದ್ದರು.

ಪ್ರಶ್ನೋತ್ತರಗಳು

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು.

ಅಕೋಲ ತಾಲ್ಲೂಕಿನಲ್ಲಿ ಬಸ್ ಡಿಪೋ ನಿರ್ಮಾಣ

130 - ಶ್ರೀ ವಿಶ್ವೇಶ್ವರ ಹೆಗ್ಗಡೆ (ಅಂಕೋಲ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅಂಕೋಲಾ ತಾಲ್ಲೂಕಿನಲ್ಲಿ ಬಸ್ ಡಿಪೋ ನಿರ್ಮಿಸಲು ಸರ್ಕಾರ ಯಾವ ಕ್ರಮ ತೆಗೆದುಕೊಳ್ಳಲಾಗಿದೆ?

ಆ) ಭೂಸ್ವಾಧೀನ ಮಾಡುವ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಇ) ಬಸ್ ಡಿಪೋವನ್ನು ತ್ವರಿತಗತಿಯಲ್ಲಿ ನಿರ್ಮಿಸಲು ಸರ್ಕಾರ ಕ್ರಮ ಕೈಗೊಳ್ಳುವರೇ?

ಶ್ರೀ ಪಿ.ಜಿ. ಆರ್. ಸಿಂಧ್ಯ (ಸಾರಿಗೆ ಸಚಿವರು) :

ಅ) ಸದರಿ ಉದ್ದೇಶಕ್ಕಾಗಿ ಸರ್ವೆ ಸಂಖ್ಯೆ 5 ಅ 1ಬಿ ರಲ್ಲಿ 5 ಎಕರೆ ಜಾಗವನ್ನು ಒದಗಿಸುವಂತೆ ಜಿಲ್ಲಾಧಿಕಾರಿ, ಉತ್ತರ ಕನ್ನಡ ಜಿಲ್ಲೆ ಇವರನ್ನು ಕೋರಲಾಗಿದೆ.

ಆ) ಮೇಲೆ ನೀಡಲಾದ ಉತ್ತರವೇ ಇದಕ್ಕೂ ಅನ್ವಯಿಸುತ್ತದೆ.

ಇ) ಜಾಗವನ್ನು ಲಭ್ಯಗೊಳಿಸಿದ ನಂತರ ಅವಶ್ಯಕತೆ ಮತ್ತು ಸಂಪನ್ಮೂಲಗಳ ಲಭ್ಯತೆಯಾನುಸಾರ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು.

ಶ್ರೀ ವಿಶ್ವೇಶ್ವರ ಹೆಗಡೆ : ಮಾನ್ಯ ಅಧ್ಯಕ್ಷರೇ, ನಿಮ್ಮಲ್ಲಿ ನನ್ನದೊಂದು ವಿನಂತಿ. ಸಾರಿಗೆ ಸಚಿವರು ಹಿಂದೆ ಸಾರಿಗೆ ಸಚಿವರಾಗಿದ್ದಾಗ 1983-85ರ ನಂತರದಲ್ಲಿ ಈ ಇಲಾಖೆಯ ಬಗ್ಗೆ ಏನು ಕಾಳಜಿ ತೆಗೆದುಕೊಂಡು ಕೆಲಸ ಮಾಡುತ್ತಿದ್ದರು ಎಂದು ನಾವು ಕೇಳಿದ್ದೇವೋ, ಕಳಿದ ನಾನು ಮೂರು

ವರ್ಷದಿಂದ ನೋಡಿತ್ತಿದ್ದೇನೆ, ಒಂದು ಸಣ್ಣ ಕೆಲಸವೂ ಸಹಾ ಕೆ.ಎಸ್.ಆರ್.ಟಿ.ಸಿ.ಯಲ್ಲಿ ಆಗದೇ ಇರುವುದನ್ನು ಗಮನಿಸುತ್ತಿದ್ದೇವೆ. ಡಿ.ಸಿ. ಯವರ ಜೊತೆಗೆ ಅಂಕೋಲಾದಲ್ಲಿ ಒಂದು ಬಸ್ ಡಿಪೋ ಆಗಬೇಕು ಎನ್ನುವುದರ ಬಗ್ಗೆ ಜಾಗ ಖರೀದಿಗೆ ಫೈಲ್ ಹೋಗಿ ವರ್ಷಗಟ್ಟಲೆ ಆಯಿತು. ಕೆ.ಎಸ್.ಆರ್.ಟಿ.ಸಿ. ಯಿಂದ ಬೇಕಾಗಿರುವ ಫಾಲೊ ಅಫ್ ಇಲ್ಲ. ರೆವಿನ್ಯೂ ಇಲಾಖೆ ಡಿ.ಸಿ.ಯವರಿಂದ ಅದಕ್ಕೆ ತಕ್ಷಣ ಮಂಜೂರು ಸಿಗುವುದೂ ಇಲ್ಲ. ಡಿಸಿ ಇವರು ಮೂರು ಎಕರೆ ಕೊಡುತ್ತೇವೆಂದು ಹೇಳುತ್ತಾರೆ, ಕೆಎಸ್ಆರ್‌ಟಿಸಿ ಯವರು 5 ಎಕರೆ ಬೇಕು ಎಂದು ಕೇಳುತ್ತಾರೆ. ಈ ಸಮಸ್ಯೆ ಬಗೆಹರಿಯುವುದು ಯಾವಾಗ? ಅಲ್ಲಿ ಡಿಪೊ ಆಗುವುದು ಯಾವಾಗ? ಅಲ್ಲಿ ಕೆಎಸ್ಆರ್‌ಟಿಸಿ ಸಮಸ್ಯೆ ಬಗೆಹರಿಯುವುದು ಯಾವಾಗ, ಜನರ ಗೋಳು ದೂರವಾಗುವುದು ಯಾವಾಗ? ಹಾಗಾಗಿ ಡಿಸಿಯವರ ಜೊತೆ, ಕಂದಾಯ ಇಲಾಖೆಯವರ ಜೊತೆ 3 ಎಕರೆಯಿಂದ 5 ಎಕರೆ ಜಾಗವನ್ನು ಯಾವಾಗ ಸ್ಯಾಂಕ್ಷನ್ ಮಾಡಿಕೊಳ್ಳುತ್ತೀರಿ ಮತ್ತು ಡಿಪೋವನ್ನು ಯಾವಾಗ ಪ್ರಾರಂಭ ಮಾಡುವುದಕ್ಕೆ ತಕ್ಷಣದಲ್ಲಿ ಈ ವರ್ಷದ ಬಜೆಟ್‌ನಲ್ಲಿ ಏನಾದರೂ ಹಣವನ್ನು ಇಡುತ್ತೀರಾ ಎಂದು ಕೇಳಲಿಕ್ಕೆ ಬಯಸುತ್ತೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೇ, ಮೂರು ವರ್ಷಗಳಿಂದ ಕೆಲಸ ಮಾಡುವುದು ಅದೆಲ್ಲಾ ಈ ಪ್ರಶ್ನೆಯಲ್ಲಿ ಬರುವುದಿಲ್ಲ. ಯಾವ ಸಣ್ಣ ಕೆಲಸವಾಗಿಲ್ಲ ಎಂದು ಖಚಿತವಾಗಿ ಹೇಳಿದರೆ ಅದಕ್ಕೆ ನಾನು ಖಚಿತವಾಗಿ ಉತ್ತರವನ್ನು ಕೊಡುತ್ತೇನೆ. ಯಾವ ಸಣ್ಣ ಕೆಲಸ ಎಂದು ತಾವು ಹೇಳಿ. ನಾನು ಮಾಡಿಕೊಡುತ್ತೇನೆ. ಆಮೇಲೆ ಕೆಎಸ್ಆರ್‌ಟಿಸಿ ಯವರು ಡಿ.ಸಿ.ಯವರು ಫಾಲೊ ಅಫ್ ಮಾಡಿಲ್ಲ ಎಂದು ಹೇಳುತ್ತಿದ್ದೀರಿ, ಈಗ ಆಕ್ಚ್ಯುಯಲ್ ಆಗಿ ಇಮ್ಮೀಡಿಯೇಟ್ ಆಗಿ ಡಿಪೋ ಮಾಡುವ ಅವಶ್ಯಕತೆ ಅಂಕೋಲಾದಲ್ಲಿ ಇಲ್ಲ. ಮತ್ತೆ ಅಂಕೋಲಾದಲ್ಲಿ ಡಿಪೋವನ್ನು ಮಾಡುವಷ್ಟು ಫೈನಾನ್ಷಿಯಲ್ ಕಂಡೀಷನ್ ಕೂಡ ಕೆಎಸ್ಆರ್‌ಟಿಸಿಗೆ ಇಲ್ಲ. ಅದನ್ನು ನಾನು ಹೇಳುತ್ತಿದ್ದೇನೆ. It is not possible. ಈಗ ನಮಗೆ ಇರುವ ರಿಸೋರ್ಸಸ್‌ನಲ್ಲಿ ನಾವು ಈ ವರ್ಷ ಪ್ರಯತ್ನವನ್ನು ಮಾಡುತ್ತೇವೆ. We will do our best.

ಶ್ರೀ ವಿಶ್ವೇಶ್ವರ ಹೆಗಡೆ : ಮಾನ್ಯ ಅಧ್ಯಕ್ಷರೇ, ನಾನು ಒಂದು ವರ್ಷದ ಹಿಂದೆ ಸದನದಲ್ಲಿ ಪ್ರಶ್ನೆ ಕೇಳಿದಾಗ ಪ್ರತಿ ತಾಲ್ಲೂಕಿಗೆ ಡಿಪೋ ಮಾಡುವ ಅಗತ್ಯತೆ ಇದೆ, ಅಂಕೋಲಾಕ್ಕೆ ಡಿಪೋವನ್ನು ಮಾಡಿಕೊಡುತ್ತೇವೆಂದು ಮಾನ್ಯ ಸಚಿವರು ಭರವಸೆಯನ್ನು ಕೊಟ್ಟಿದ್ದರು. ಈಗ ತುರ್ತಾಗಿ ಮಾಡುವ ಅಗತ್ಯವೇ ಇಲ್ಲ ಎಂದು ಇಷ್ಟು ಹಗುರವಾಗಿ ಉತ್ತರ ಹೇಳಿದರೆ ಹೇಗೆ? ಹಿಂದಿನ ಸದನದಲ್ಲಿ ಒಂದು ರೀತಿ ಉತ್ತರ, ಈ ಸದನದಲ್ಲಿ ಒಂದು ರೀತಿ ಉತ್ತರ ಹೇಳಿದರೆ ಹೇಗೆ? ಅಗತ್ಯ ಇದೆ ಎನ್ನುವುದನ್ನು ಹಿಂದಿನ ಸದನದಲ್ಲಿ ಒಪ್ಪಿಕೊಂಡಿದ್ದಾರೆ. ಹಾಗಾಗಿ ಜಾಗ-ಬೇಕು ಎಂದು ಮಂಜೂರಾತಿಗೆ ಪ್ರಯತ್ನ ನಡೆಯುತ್ತಿದೆ. ಮತ್ತೆ ಈಗ ಅಗತ್ಯವೇ ಇಲ್ಲ ಎಂದು ಹೇಳಿದರೆ ಹೇಗೆ? ಅಗತ್ಯ ಇದೆ ಅಲ್ಲಿ. ಸಮಸ್ಯೆಯನ್ನು ದೂರ ಮಾಡುವುದಕ್ಕೆ ತಕ್ಷಣ ಮಂಜೂರಾತಿ ಪಡೆದು ಡಿಪೋ ಕೆಲಸವನ್ನು ಪ್ರಾರಂಭ ಮಾಡಿಸಬೇಕು.

ಶ್ರೀ ಪಿ. ಜಿ. ಆರ್. ಸಿಂಧ್ಯ : ಪ್ರತಿ ತಾಲ್ಲೂಕಿನಲ್ಲಿ ರಾಷ್ಟ್ರೀಕರಣವಾಗಿರುವ ಜಿಲ್ಲೆಗಳಲ್ಲಿ ಹಂತಹಂತವಾಗಿ ನಮ್ಮ ಹಣಕಾಸಿನ ಸಂಪನ್ಮೂಲಗಳ ಆಧಾರದಮೇಲೆ ಮಾಡಬೇಕು ಎನ್ನುವ

ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇನೆ ಎಂದು ನಾನು ಸದನದಲ್ಲಿ ಹೇಳಿದ್ದೇನೆ. ಆದರಿಂದಾಗಿ ಕಾರವಾರ ಜಿಲ್ಲೆಯ ಪ್ರಮುಖ ತಾಲ್ಲೂಕು ಕೇಂದ್ರವಾಗಿರುವ ಅಂಕೋಲಾ ಕೂಡ ತಾಲ್ಲೂಕು ಆಗಿರುವುದರಿಂದ ದೊಡ್ಡ ಪಟ್ಟಣವಾಗಿರುವ ಅಂಕೋಲಾದಲ್ಲೂ ಸಹಿತ ಮಾಡಬೇಕು ಎನ್ನುವ ಉದ್ದೇಶ ಸರ್ಕಾರಕ್ಕೆ ಇದೆ. ಆದರೆ ನಮ್ಮ ಹಣಕಾಸಿನ ಅವಶ್ಯಕತೆ, ಹಣಕಾಸಿನ ಲಭ್ಯತೆಯ ಆಧಾರದಮೇಲೆ ಮಾಡಬಹುದೇ ವಿನಹ ಹೀಗೆ ಮಾಡುತ್ತೇವೆ ಎಂದು ಹೇಳಿ ಭರವಸೆಯನ್ನು ಕೊಡುವ ಸ್ಥಿತಿಯಲ್ಲಿ ನಾನು ಇಲ್ಲ. ಆದರೂ ನಾನು ಅಧಿವೇಶನದ ನಂತರ ಆ ಸಂಬಂಧಪಟ್ಟ ಜಿಲ್ಲಾಧಿಕಾರಿಗಳನ್ನು ಕರೆಯಿಸಿ ಆದಷ್ಟು ಬೇಗ ಆ ಜಮೀನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಿ ಎಂದು ಅವರಿಗೆ ಹೇಳುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ : ರೆವಿನ್ಯೂ ಇಲಾಖೆಯವರ ಜೊತೆಗೆ ಅದೇನು ಮಾತನಾಡಬೇಕು? ಸಚಿವರು ಸಚಿವರೇ ಮಾತನಾಡಿಕೊಂಡು ನಿರ್ದೇಶನ ಕೊಡಬೇಕಾಗಬಹುದು, ಕಂದಾಯ ಇಲಾಖೆಯ ಸಚಿವರ ಜೊತೆಗೆ ಮಾತನಾಡಿಕೊಂಡು ಆ ಬಗ್ಗೆ ಪ್ರಯತ್ನವೇನಾದರೂ ಮಾಡುತ್ತೀರಾ?

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾಡೋಣ.

ಚಾಮರಾಜನಗರ ಹಾಗೂ ರಾಜ್ಯದ ಇತರ ಭಾಗಗಳಲ್ಲಿ ತೆಂಗಿನ ಮರಗಳಿಗೆ ರೋಗ ತಗುಲಿರುವುದು

131 - ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ತೋಟಗಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಾಮರಾಜ ನಗರವೂ ಸೇರಿದಂತೆ ರಾಜ್ಯದಾದ್ಯಂತ ಎಷ್ಟು ಪ್ರದೇಶಗಳಲ್ಲಿ ತೆಂಗಿನ ಮರಗಳಿಗೆ ರೋಗ ತಗುಲಿದೆ.

ಆ) ತೆಂಗಿನ ರೋಗ ನಿವಾರಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಡಿ.ಟಿ. ಜಯಕುಮಾರ್ (ತೋಟಗಾರಿಕೆ ರಾಜ್ಯ ಸಚಿವರು) :

ಅ) ಚಾಮರಾಜ ನಗರವೂ ಸೇರಿದಂತೆ ರಾಜ್ಯದಲ್ಲಿ ಸುಮಾರು 11091 ಹೆಕ್ಟೇರ್ ಪ್ರದೇಶದಲ್ಲಿ ಕಪ್ಪುತಲೆ ಹುಳುವಿನ ಬಾಧೆ ಕಾಣಿಸಿ ಕೊಂಡಿದೆ. ಕಾಂಡ ಸೋರುವ ಮತ್ತು ಅಣಬೆ ರೋಗಗಳು ಅಲ್ಲಲ್ಲಿ ಸುಮಾರು 1320 ಹೆಕ್ಟೇರ್ ಪ್ರದೇಶದಲ್ಲಿ ಕಾಣಿಸಿಕೊಂಡಿದೆ.

ಆ) 1) ತೆಂಗಿನ ಕಪ್ಪುತಲೆ ಹುಳುವಿನ ಸಮಗ್ರ ನಿಯಂತ್ರಣಕ್ಕಾಗಿ ಸಸ್ಯ ಸಂರಕ್ಷಣಾ ತಂಡಗಳನ್ನು ರಚಿಸಿ ನಿಯಂತ್ರಣ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

2) ಕೀಟಬಾದೆ ಪ್ರಾರಂಭಿಕ ಹಂತದಲ್ಲಿರುವ ತೋಟಗಳಲ್ಲಿ ಪರೋಪಜೀವಿಗಳನ್ನು ಬಿಡುಗಡೆ ಮಾಡಲಾಗುತ್ತಿದೆ.

3) ಕೀಟಬಾದೆ ತೀವ್ರವಾಗಿರುವ ಪ್ರದೇಶಗಳಲ್ಲಿ ಬೇರಿನ ಮೂಲಕ ಕೀಟನಾಶಕದ ಉಪಚಾರ ಕೈಗೊಳ್ಳಲಾಗುತ್ತಿದೆ.